ಓ.ಎಸ್.ನಂಃ 52/2020

**ಪಿಡಬ್ಲ್ಯೂ-4**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 15.06.2024 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಶ್ರೀ ಜೆ ಎಸ್ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ದಾವ ಷೆಡ್ಯೂಲ್ ಆಸ್ತಿಯ ಪಶ್ಚಿಮಕ್ಕೆ ನನ್ನ ಅಸ್ತಿ ಇರುತ್ತೇನೆ. ಆದರೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅದನ್ನು ನಮೂದು ಮಾಡಿರುವುದಿಲ್ಲ. 1ನೇ ವಾದಿಯು ನನ್ನನ್ನು ಸಾಕ್ಷಿ ವಿಚಾರಣೆ ನೀಡಲು ಕರೆದಿರುವುದರಿಂದ ನಾನು ಸಾಕ್ಷಿ ವಿಚಾರಣೆ ನೀಡಿರುತ್ತೇನೆ. ದಾವ ಷೆಡ್ಯೂಲ್ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನಾಗಲೀ, ಪ್ರತಿವಾದಿಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನಾಗಲೀ ನಾನು ನೋಡಿರುವುದಿಲ್ಲ. ದಾವ ಷೆಡ್ಯೂಲ್ ಆಸ್ತಿಯ ಸರ್ವೇ ನಂಃ 137. ವಿಸ್ತೀರ್ಣ 1 ಎಕರೆ 08 ಗುಂಟೆ ಇರುತ್ತದೆ. ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಃ 137 ಪೋಡಿ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೇ ನಂಃ 137 ರಲ್ಲಿ ವಿಸ್ತೀರ್ಣ ಎಷ್ಟು ಇದೆ ನನಗೆ ಗೊತ್ತಿಲ್ಲ. ವಾದಿಯು ಹೇಳಿದ್ದರಿಂದ ನಾನು 1 ಎಕರೆ 08 ಗುಂಟೆ ಇದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಯ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ 1ನೇ ವಾದಿ ಹೇಳಿದ್ದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗೋಪಾಲಯ್ಯ, ರಂಗಯ್ಯ ನನಗೆ ಗೊತ್ತು. ಗೋಪಾಲಯ್ಯ ರವರಿಗೆ ಸರ್ವೇ ನಂಃ 137 ರಲ್ಲಿ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ರಂಗಯ್ಯರವರಿಗೆ ಸರ್ವೇ ನಂಃ 137 ರಲ್ಲಿ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಶ್ರೀನಿವಾಸಯ್ಯರವರಿಗೆ ದಾವ ಷೆಡ್ಯೂಲ್ ಆಸ್ತಿಯಲ್ಲಿ ಎಷ್ಟು ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ದಾವ ಷೆಡ್ಯೂಲ್ ಆಸ್ತಿಯ ಬಗ್ಗೆ ನಮಗಾಗಲೀ ನಮ್ಮ ಕುಟುಂಬದವರಿಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಸು 4 ವರ್ಷಗಳ ಹಿಂದೆ ಪ್ರತಿವಾದಿಗಳು ವಾದಿಗಳಿಗೆ ತೊಂದರೆ ಕೊಟ್ಟಿರುತ್ತಾರೆ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ದಾವ ಷೆಡ್ಯೂಲ್ ಆಸ್ತಿಯಲ್ಲಿ ವಾದಿಗಳು ಅನುಭವದಲ್ಲಿ ಇಲ್ಲ, ಪ್ರತಿವಾದಿಗಳು ಅನುಭವದಲ್ಲಿದ್ದಾರೆ ಎಂದರೆ ಸಾಕ್ಷಿಯು ವಾದಿಗಳು ಮತ್ತು ಪ್ರತಿವಾದಿಗಳು ಇಬ್ಬರೂ ಅನುಭವದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಮೊದಲು ಎಲ್ಲಾ ಆಸ್ತಿಯಲ್ಲೂ ಸ್ವಾದೀನಾನುಭವದಲ್ಲಿದ್ದರು. ದಾವ ಷೆಡ್ಯೂಲ್ ಆಸ್ತಿಯಲ್ಲಿ ಪ್ರತಿವಾದಿಗಳೇ ಸ್ವಾದೀನಾನುಭವದಲ್ಲಿರುತ್ತಾರೆ ಎಂದರೆ

ಸರಿಯಲ್ಲ. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ನಾನು ವಾದಿಗಳ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ

ಓ.ಎಸ್.ನಂಃ 52/2020

**ಪಿಡಬ್ಲ್ಯೂ-2**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 15.06.2024 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: ಶ್ರೀ ಜೆ ಎಸ್ ವಕೀಲರಿಂದಃ**

ನನ್ನ ಮನೆಯು 1ನೇ ವಾದಿಯ ಮನೆಯ ಪಕ್ಕದಲ್ಲಿದೆ. ನನಗೆ ಓದಲು ಬರೆಯಲು ಬರುವುದಿಲ್ಲ. ವಾದಿಯ ಜಮೀನಿನ ಪಕ್ಕದಲ್ಲಿಯೇ ನನ್ನ ಜಮೀನು ಇರುತ್ತದೆ. ವಾದಿಯ ಜಮೀನಿನ ಸರ್ವೇ ನಂಬರ್ 130 ಆಗಿರುತ್ತದೆ. ವಿಸ್ತೀರ್ಣ 1 ಎಕರೆ 8 ಗುಂಟೆ ಇರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತು. 1ನೇ ಪ್ರತಿವಾದಿಗೆ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯ 1 ಎಕರೆ 8 ಗುಂಟೆಗೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ಗೋಪಾಲಯ್ಯನ ಆಸ್ತಿಗೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಯನ್ನು ನೋಡಿಲ್ಲ, ಅದರ ವಿಸ್ತೀರ್ಣ ಸಹ ನನಗೆ ಗೊತ್ತಿಲ್ಲ. ಗೋಪಾಲಯ್ಯನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. 1ನೇ ವಾದಿಯು ಗೋಪಾಲಯ್ಯನ ಮಗ. ಪ್ರತಿವಾದಿಗಳು ವಾದಿಗೆ ಸುಮಾರು ನಾಲ್ಕುವರುಷದ ಹಿಂದೆ ತೊಂದರೆ ಕೊಟ್ಟಿರುತ್ತಾರೆ. ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ಗಲಾಟೆ ಆಗಿತ್ತು ಎಂದು ನಮೂದು ಮಾಡಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನಾನೇ ತಯಾರು ಮಾಡಿಸಿರುತ್ತೇನೆ. ಗೋಪಾಲಯ್ಯನವರು ತೀರಿಕೊಂಡು ಎಷ್ಟು ದಿನ ಆಯಿತು ಎಂದು ನನಗೆ ಗೊತ್ತಿಲ್ಲ. ನನ್ನ ಆಸ್ತಿಯ ಸರ್ವೇ ನಂಬರ್ 119/1ಪಿ 10 ಗುಂಟೆಗೆ ಗೆ ಸಂಬಂಧಪಟ್ಟಂತೆ ಆರ್ ಟಿ ಸಿ ಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ವಾದಿಗಳು ಮತ್ತು ಪ್ರತಿವಾದಿಗಳ ನಡುವೆ ಆದ ಜಗಳದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಜಗಳವನ್ನು ನೋಡಿರುತ್ತೇನೇ. 1ನೇ ವಾದಿಯ ಜಮೀನಿನ ಪಕ್ಕದಲ್ಲಿ ನಮ್ಮ ಜಮೀನು ಇರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಈ ಮೊದಲು ಪ್ರತಿವಾದಿಗಳ ಮೇಲೆ ಹೂಡಿದ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ. 1ನೇ ವಾದಿಯು ನನ್ನನ್ನು ಸಾಕ್ಷಿ ಹೇಳುವಂತೆ ನನ್ನನ್ನು ಕರೆದಿದ್ದರಿಂದ ನಾನು ಸಾಕ್ಷಿ ವಿಚಾರಣೆ ನೀಡುತ್ತಿದ್ದೇನೆ. 1ನೇ ವಾದಿಯು ನನಗೆ

ಹೇಳಿದ್ದರಿಂದ ನಾನು ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಯಲ್ಲಿ ವಾದಿಗಳಿಗೆ ಯಾವುದೇ ಆಸ್ತಿ ಇಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಯ ಪಕ್ಕದಲ್ಲಿ ನನ್ನ ಜಮೀನು ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ವಾದಿಗಳ ಜೊತೆ ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಜಗಳವಾಗಿದ್ದರೆ ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆಸುತ್ತಿದ್ದೆ ಆದ್ದರಿಂದ ಜಗಳ ಆಗಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ